ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 524/2018

ಫಿರ್ಯಾದಿ ಆರೋಪಿ

ಮೆ. ಶ್ರೀರಾಮ ಟ್ರಾನ್ಸಪೋರ್ಟ ಫೈನಾನ್ಸ ಕಂ. ಲಿ., ವಿರುದ್ಧ ಪ್ರತಾಪ ಅಮೃತ ಗೋಸಾವಿ
ಶಾಖೆ ಕುಮಟಾ

ಆರೋಪಿಃ

ಪ್ರತಾಪ ಅಮೃತ ಗೋಸಾವಿ ,
ವಯಸ್ಸುಃ 25 ವರ್ಷ, ಸಾಃ ಮನೆ ನಂ. 895,
ತಟಗಾರ ಕ್ರಾಸ್, ಗಣಪತಿ ಗಲ್ಲಿ, ಸಬ್ಗೇರಿ, ಯಲ್ಲಾಪುರ .

– ದಂಡ ಪಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ದಿಃ 20-05-2013 ರಂದು ನೀವು ಫಿರ್ಯಾದುದಾರ ಸಂಸ್ಥೆಯಿಂದವಾಹನ ಸಂಖ್ಯೆ ಕೆ.ಎ. 25 ಬಿ-8760 ನ್ನು ಖರೀದಿಸುವ ಸಲುವಾಗಿ ಒಟ್ಟು ರೂ . 9,41,945/-ನ್ನು ಸಾಲವನ್ನು ಪಡೆದಿದ್ದು, ನೀವು ಅದರ ತೀರುವಳಿಯ ಸಲುವಾಗಿ ದಿಃ 30-06-2015 ರಂದು ಫಿರ್ಯಾದುದಾರಿಗೆ ನಿಮ್ಮ ಖಾತೆ ಇರುವ ಕರ್ನಾಟಕ ಬ್ಯಾಂಕ್, ಯಲ್ಲಾಪುರ ಶಾಖೆಯ ಚೆಕ್ ನ್ನು ರೂ. 4,15,000/- ಗೆ ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಕುಮಟಾ ಶಾಖೆಯ ಎಚ್.ಡಿ.ಎಫ್.ಸಿ ಬ್ಯಾಂಕಿಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 10-07-2015 ರ, ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸು ಜಾರಿಯಗಿದ್ದರೂ ಸಹ ಸಹ ನೀವು ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ, ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

<u>ಉತ್ತರ –</u>

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

<u>ಉತ್ತರ –</u>

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 15-04-2023.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ